**ಓ ಎಸ್ ನಂಃ 113/2018**

**ಪಿ. ಡಬ್ಲ್ಯೂ ಃ 1**

**ದಿಃ 19.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 5 ರವರ ಪರ ಕುಮಾರಿ ವಿ.ಆರ್ ವಕೀಲರಿಂದ ಃ**

1 ನೇ ಪ್ರತಿವಾದಿ ರಾಮಕ್ಕ ನನ್ನ ತಾಯಿಯಾಗಬೇಕು. ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿದ್ದೇವೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ 2 ರಿಂದ 4 ರವರು ಚೆನ್ನಾಗಿರುತ್ತೇವೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಆದರೂ ಸಹ ನಮ್ಮ ಊರು ಸುಗ್ಗನಹಳ್ಳಿಗೆ ಬಂದು ಹೋಗಿ ಮಾಡುತ್ತೇನೆ. ಪ್ರತಿವಾದಿ 1 ರಿಂದ 4 ರವರು ಸುಗ್ಗನಹಳ್ಳಿಯಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ. ಅದು ನಮ್ಮ ತಾಯಿಯ ಮನೆಯಾಗಿರುತ್ತದೆ. ಅದು ನಮ್ಮ ತಾತನ( ತಂದೆಯ ತಂದೆ) ಹೆಸರಿನಲ್ಲಿತ್ತು. ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ನ್ಯಾಯಾಲಯಕ್ಕೆ ಕೊಟ್ಟ ಎಲ್ಲ ದಾಖಲೆಗಳು ಸರಿ ಆಗಿವೆ. ಅದರಲ್ಲಿ ಬರೆದ ಎಲ್ಲ ವಿಷಯಗಳು ಗೊತ್ತು. 5 ನೇ ಪ್ರತಿವಾದಿಯು ನಮ್ಮ ಒಟ್ಟು ಕುಟುಂಬದ ಒಂದು ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಸರಿ.

ನಮ್ಮ ತಂದೆ ಭಾಗವಾದ ನಂತರ ಅವರಿಗೆ ಎಷ್ಟು ಭಾಗ ಬಂದಿದೆ ಎಂದು ಗೊತ್ತಿಲ್ಲ. ನಾನು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರೆ ಈ ವಿಷಯ ನನಗೆ ಗೊತ್ತಿರುತ್ತಿತ್ತು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ತಾನು ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನಲ್ಲಿ ಒಂದು ಬೋರ್ ವೆಲ್ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಆ ಸ್ವತ್ತಿನಲ್ಲಿ ಕೇವಲ ರಾಗಿ ಬೆಳೆಯುತ್ತಾರೆ. 5 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನಲ್ಲಿ ಅಡಿಕೆ ಮರಗಳಿವೆ ಮತ್ತು ಬೋರ್ ವೆಲ್ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ರೇಷ್ಮೆ ಮತ್ತು ತೆಂಗು ಇವೆ ಎಂದರೆ ಸರಿಯಲ್ಲ. ನನ್ನ ಮದುವೆಯಾದ ಬಗ್ಗೆ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ. ನಮ್ಮ ತಂದೆ 2006 ರಲ್ಲಿ ತೀರಿಕೊಂಡಿದ್ದಾರೆ. ಕ್ರಯಪತ್ರವಾದ ನಂತರ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ನಾನು ಕೊಟ್ಟಿಲ್ಲ.



ಈ ಮೊದಲು ಪಾಟೀ ಸವಾಲಿನಲ್ಲಿ ನಾನು ನಮ್ಮ ತಾತ ನನ್ನ ತಮ್ಮಂದಿರಾದ ಲೋಕೇಶ್ ಮತ್ತು ಚಂದ್ರ ಇವರಿಗೆ ಭಾಗ ಕೊಟ್ಟಿದ್ದಾರೆಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಈಗ ನಮ್ಮ ಕುಟುಂಬಕ್ಕೆ ಎಷ್ಟು ಸ್ವತ್ತು ಗಳಿವೆ ಎಂದು ನನಗೆ ಗೊತ್ತಿಲ್ಲ. ನಾನು ಒಟ್ಟು ಕುಟುಂಬದಲ್ಲಿ ಇಲ್ಲದ ಕಾರಣ ಆ ಬಗ್ಗೆ ನನಗೆ ಗೊತ್ತಿಲ್ಲ

ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿದ್ದರೆ ಎನ್ನುವ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂಬ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ. ಪ್ರತಿವಾದಿ 1 ರಿಂದ 4 ರವರು ಮತ್ತು ನಾನು ಸೇರಿ ವಾದಪತ್ರವನ್ನು ಬರೆಯಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಚೆನ್ನಾಗಿರುವುದರಿಂದ ಅವರು ತಕರಾರು ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡು ಸ್ವಾಧೀನದಲ್ಲಿರುವ ಸ್ವತ್ತನ್ನು ಅವರಿಗೆ ಹೆದರಿಸಿ ನಾವು ತೆಗೆದುಕೊಳ್ಳಬೇಕು ಎಂದು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**